ಸಾಕ್ಷಿಗೆ ದಿನಾಂಕ 19-09-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

ಅರ್ಜಿ ಕಲಂ.311 ರ ಈ ದಿನದ ಆದೇಶದ ಮೇರೆಗೆ

ಮುಂದುವರೆದ ಪಾಟೀ ಸವಾಲು. ಆರೋಪಿತರ ಪರ ಶ್ರೀ ಎನ್ ಜಿ ಬಿ ವಕೀಲರಿಂದಃ-

ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲವೆಂದರೆ ಸರಿ. ಆರೋಪಿತರು ನಮ್ಮ ಮೇಲೆ ಮತ್ತು ನಮ್ಮ ಹೆಂಡತಿಯ ಮೇಲೆ ಯಾವುದೇ ಹಲ್ಲೆ ಮಾಡಿಲ್ಲವೆಂದರೆ ಸರಿ. ನಿಪಿ-1 ರ ದೂರಿನಲ್ಲಿ ಏನು ಬರೆದಿರುತ್ತಾರೆನ್ನುವ ವಿಚಾರ ನನಗೆ ಗೊತ್ತಿಲ್ಲವೆಂದರೆ ಸರಿ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ನಾನು ಪೋಲೀಸರಿಗೆ ಯಾವುದೇ ಕಟ್ಟಿಗೆ ತೋರಿಸಿರುವುದಿಲ್ಲ ಮತ್ತು ಪೋಲೀಸರು ಯಾವುದೇ ಕಟ್ಟಿಗೆ ಅಮಾನತ್ತುಪಡಿಸಿಕೊಂಡಿರುವುದಿಲ್ಲವೆಂದರೆ ಸರಿ. ನಾವು ಮತ್ತು ಆರೋಪಿತರು ಜಮೀನು ವಿಚಾರಕ್ಕಾಗಿ ರಾಜೀ ಮಾಡಿಕೊಂಡಿರುತ್ತೇವೆಂದರೆ ಸರಿ. ಆರೋಪಿತರು ನನಗೆ ಮತ್ತು ಚಾಸಾ-4 ರವರಿಗೆ ಯಾವುದೇ ರೀತಿಯಿಂದ ಅವಾಚ್ಯವಾಗಿ ಬೈದಿಲ್ಲ, ಕಟ್ಟಿಗೆಯಿಂದ ಹಲ್ಲೆ ಮಾಡಿಲ್ಲ, ಜೀವ ಬೆದರಿಕೆ ಹಾಕಿಲ್ಲವೆಂದರೆ ಸರಿ. ಯಾವ ಕಾರಣಕ್ಕಾಗಿ ನಿಪಿ-4 ರ ಪೋಟೋ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ.

ಮರು ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿತರೊಂದಿಗೆ ನಾನು ರಾಜೀ ಮಾಡಿಕೊಂಡಿರುವುದರಿಂದ ಈ ಹಿಂದೆ ನಾನು ಹೇಳಿದ ಸಾಕ್ಷಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ